


ಈ ಪುಸ್ತಕಕ್ಕೆ ಪ್ರೇರಣೆ ಒಂದು ವಿವಾದದಿಂದ ಉಂಟಾಗುತ್ತದೆ. 2012ರ ಏಪ್ರಿಲ್–ಮೇ ತಿಂಗಳಲ್ಲಿ ಎನ್.ಸಿ.ಇ.ಆರ್.ಟಿ. ಪ್ರಕಟಿಸಿದ್ದ ಹನ್ನೊಂದನೇ ತರಗತಿಯ ಸಮಾಜಶಾಸ್ತ್ರದ ಪಠ್ಯಪುಸ್ತಕದಲ್ಲಿದ್ದ ಒಂದು ವ್ಯಂಗ್ಯಚಿತ್ರದಿಂದ ಈ ಕತೆ ಪ್ರಾರಂಭವಾಗುತ್ತದೆ. ಇದರಲ್ಲಿನ ವ್ಯಂಗ್ಯಚಿತ್ರದಲ್ಲಿ ಸಂವಿಧಾನದ ರಚನೆಯೆಂಬ ಬಸವನಹುಳುವೊಂದರ ಮೇಲೆ ಅಂಬೇಡ್ಕರ್ ಸವಾರಿ ಮಾಡುತ್ತಾ ಅದರ ಮೂಗಿನಿಂದ ಹೊಮ್ಮಿರುವ ಲಗಾಮನ್ನು ಹಿಡಿದಿದ್ದಾರೆ. ಹಿಂದೆ ನಿಂತ ಪಂಡಿತ್ ನೆಹರೂ ಚಾವಟಿಯನ್ನು ಮೇಲಕ್ಕೆತ್ತಿದ್ದಾರೆ. ಈ ವ್ಯಂಗ್ಯಚಿತ್ರವನ್ನು ಪಠ್ಯಪುಸ್ತಕದಲ್ಲಿ ಸೇರಿಸಿರುವುದನ್ನ ಅನೇಕರು ಪ್ರತಿಭಟಿಸಿ ವಿರೋಧಿಸಿದರು. ಉದಾರವಾದಿಗಳು ಅಭಿವ್ಯಕ್ತಿ ಸ್ವಾತಂತ್ರ್ಯದ ಮಾತೆತ್ತಿ ಆ ವ್ಯಂಗ್ಯಚಿತ್ರದ ಪ್ರಕಟಣೆಯನ್ನು ಸಮರ್ಥಿಸಿದ್ದರು. ಇಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ವ್ಯಂಗ್ಯಚಿತ್ರಕ್ಕಿರಬೇಕಾದ ಅಭಿರುಚಿ, ಹಾಸ್ಯ ಕುಹಕಗಳ ನಡುವಿನ ಅಂತರ ಮತ್ತು ಜಾತಿವ್ಯವಸ್ಥೆಯ ಪೂರ್ವಗ್ರಹಗಳೆಲ್ಲವೂ ಚರ್ಚೆಗೆ ಒಳಗಾಗಿದ್ದುವು. ಪ್ರತಿಯೊಂದನ್ನೂ ಒಂದು ಸಂದರ್ಭದಲ್ಲಿ ನೋಡಿ ಗುಣಾವಗುಣಗಳನ್ನು ಚರ್ಚಿಸಬೇಕಾಗುತ್ತದೆ ಎನ್ನುವ ವಾದವನ್ನು ಸಮರ್ಥಿಸುತ್ತಲೇ ಆ ವ್ಯಂಗ್ಯಚಿತ್ರವು ಆರೋಗ್ಯಪೂರ್ಣ ಹಾಸ್ಯದ ಪ್ರತೀಕವಾಗಿತ್ತೇ ಎನ್ನುವ ಪ್ರಶ್ನೆಯನ್ನು ನಾವು ಕೇಳಬೇಕು. ಒಬ್ಬರಿಗೆ ಹಾಸ್ಯವಾಗಿ ಕಾಣಬಹುದಾದ ಚಿತ್ರಣ ಮತ್ತೊಬ್ಬರನ್ನು ಅಪಮಾನಿಸುವಂತಿರಬಹುದೇ ಎನ್ನುವುದರಿಂದ ಉದ್ಭವವಾದ ವಿಚಾರವನ್ನು ಹಿಡಿದು ಶ್ಯಾಮ್ ಸಂದರ್, ಅಂಬೇಡ್ಕರ್ ಬಗ್ಗೆ ಬಂದಿರುವ ಆದಷ್ಟು ವ್ಯಂಗ್ಯಚಿತ್ರಗಳನ್ನು ಸಂಗ್ರಹಿಸುವ ಕೆಲಸದಲ್ಲಿ ತೊಡಗುತ್ತಾರೆ. ಪ್ರತಿ ವ್ಯಂಗ್ಯಚಿತ್ರದ ಹಿನ್ನೆಯಲ್ಲಿನ ವಾರ್ತೆ, ಚರ್ಚೆ, ಸಂದರ್ಭವನ್ನು ಪರಿಗಣಿಸುತ್ತಾ ಆ ಬಗ್ಗೆ ಟಿಪ್ಪಣಿ ಮಾಡುತ್ತಾರೆ. ಹೀಗೆ ಈ ಪುಸ್ತಕ ಒಂದು ನೆಲೆಯಲ್ಲಿ ವ್ಯಂಗ್ಯಚಿತ್ರದ ಕಲೆ, ಕಲಾತ್ಮಕತೆ, ಸೌಂದರ್ಯಶಾಸ್ತ್ರದ ಮೀಮಾಂಸೆಯಲ್ಲಿ ತೊಡಗಿದರೆ, ಮತ್ತೊಂದು ನೆಲೆಯಲ್ಲಿ ಇತಿಹಾಸವನ್ನು ಹೊಸದಾಗಿ, ಹೊಸ ಕಣ್ಣುಗಳಿಂದ ಅರ್ಥೈಸುವ ನೆಲೆಯಲ್ಲಿ ಕೆಲಸಮಾಡುತ್ತದೆ. ಅಷ್ಟೇ ಅಲ್ಲ, ನಮ್ಮ ಸಮಾಜದ ಪೂರ್ವಗ್ರಹಗಳ ಬಗ್ಗೆಯೂ ಅಂದಿನ ಮತ್ತು ಇಂದಿನ ಸಂದರ್ಭದ ಟಿಪ್ಪಣಿಗಳನ್ನೊದಗಿಸುತ್ತದೆ.

ಉಂಬರ್ಟೋ ಇಕೋ ಅವರ ಪುಸ್ತಕ '**The Mysterious Flame of Queen Loana**' ಕಾದಂಬರಿಯಲ್ಲಿಯೂ ಇಂತಹ ಒಂದು ಪ್ರಸಂಗ ಬರುತ್ತದೆ. ಆದರೆ, ಅದರ ಸಂದರ್ಭವೇ ಬೇರೆ.